ದಿ.03.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯ್ತು.

**ಪಾಟೀ ಸವಾಲುಃ 4, 15ರಿಂದ 19ನೇ ಆರೋಪಿತರ ಪರ ಶ್ರೀ ಟಿ ಎಸ್ ವಕೀಲರಿಂದಃ**

43. ನನ್ನ ತಂದೆ ಮತ್ತು ಮೃತ ದೊಡ್ಡಚಿನ್ನಪ್ಪ ಅವರು ಸಹೋದರರು ಎಂದರೆ ಸರಿ. ಅವರಿಬ್ಬರ ತಂದೆಯ ಹೆಸರು ನಡುಪಪ್ಪ. ನಡುಪಪ್ಪನ ಸಹೋದರ ಮೋಟಪ್ಪ ಎಂದರೆ ನನಗೆ ಗೊತ್ತಿಲ್ಲ. ನಡುಪಪ್ಪನ ತಂದೆಯ ಹೆಸರು ಕರಿಮುನಿಯಪ್ಪ ಎಂದರೆ ಸರಿ. ಮೋಟಪ್ಪನಿಗೆ ಐದು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. 18ನೇ ಆರೋಪಿ ಮತ್ತು 19ನೇ ಆರೋಪಿತರು ಮೋಟಪ್ಪನ ಮಕ್ಕಳಾದ ಕತ್ತೆಮುನಿಯಪ್ಪ ಮತ್ತು ಮುನಿಶಾಮಪ್ಪನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಆ ಸಂಬಂಧಗಳ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

44. ನನ್ನ ತಂದೆಗೆ ನನ್ನನ್ನು ಒಳಗೊಂಡಂತೆ ಮೂವರು ಮಕ್ಕಳು ಎಂದರೆ ಸರಿ. ನನ್ನ ಚಿಕ್ಕಪ್ಪ ದೊಡ್ಡಚಿನ್ನಪ್ಪ ಈತನಿಗೆ ಮೂರು ಜನ ಹೆಣ್ಣುಮಕ್ಕಳು ಸಹ ಇದ್ದಾರೆ ಎಂದರೆ ಸರಿ. ನನ್ನ ತಾಯಿಯ ಹೆಸರು ವೆಂಕಟಮ್ಮ. ದೊಡ್ಡಚಿನ್ನಪ್ಪನ ಹೆಂಡತಿಯ ಹೆಸರು ನಾರಾಯಣಮ್ಮ. ನನ್ನ ತಂದೆ ತಾಯಿ ಇಬ್ಬರು ತೀರಿಕೊಂಡಿದ್ದಾರೆ. ಈ ಘಟನೆಯ ನಂತರ ಅವರು ತೀರಿಕೊಂಡಿದ್ದಾರೆ. 2017-18ರಲ್ಲಿ ನನ್ನ ತಂದೆ ತೀರಿಕೊಂಡಿದ್ದಾರೆ. 2018ರಲ್ಲಿ ನನ್ನ ತಾಯಿ ತೀರಿಕೊಂಡಿದ್ದಾರೆ.

45. 1993ರಲ್ಲಿ ನನ್ನ ತಂದೆಗೂ ಮತ್ತು ಆತನ ಸಹೋದರ ದೊಡ್ಡಚಿನ್ನಪ್ಪನಿಗೂ ಆಸ್ತಿಯಲ್ಲಿ ಭಾಗ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದ್ಯಾವರಹಳ್ಳಿ ಗ್ರಾಮದ ಜಮೀನು ಸರ್ವೆ ನಂಬರ್ 21ರಲ್ಲಿ ನನ್ನ ತಂದೆಗೆ 1 ಎಕರೆ 30 ಗುಂಟೆ ಮತ್ತು ದೊಡ್ಡಚಿನ್ನಪ್ಪನಿಗೆ 2 ಎಕರೆ

ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಜಮೀನಿನಲ್ಲಿ 1 ಎಕರೆ 30 ಗುಂಟೆ ಕ್ಷೇತ್ರ ನನ್ನ ತಂದೆಯ ಹೆಸರಿನಲ್ಲಿ ದಾಖಲಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಉಳಿದ ಎಕರೆ ದೊಡ್ಡಚಿನ್ನಪ್ಪನ ಹೆಸರಿನಲ್ಲಿ ದಾಖಲಾಗಿರುವುದು ನನಗೆ ಜ್ಞಾಪಕವಿಲ್ಲ. ನನ್ನ ತಂದೆ ತೀರಿಕೊಳ್ಳುವಾಗ ಅವರ ಹೆಸರಿನಲ್ಲಿ ಯಾವ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ದೊಡ್ಡಚಿನ್ನಪ್ಪ ಇವರು ತೀರಿಕೊಳ್ಳುವಾಗ ಅವರ ಹೆಸರಿನಲ್ಲಿ ಯಾವ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ತಾಯಿಯ ಹೆಸರಿನಲ್ಲಿ ಅವರ ಮಕ್ಕಳ ಒಪ್ಪಿಗೆಯ ಮೇರೆಗೆ ಯಾವ ಆಸ್ತಿಗಳು ಖಾತೆಯಾಗಿದ್ದವು ಎಂದು ನನಗೆ ಗೊತ್ತಿಲ್ಲ. ನಿಮ್ಮ ತಾಯಿ ತೀರಿಕೊಂಡ ಮೇಲೆ ಯಾವ ಜಮೀನುಗಳ ಸ್ವಾಧೀನ ನಿಮಗೆ ಮತ್ತು ನಿಮ್ಮ ಸಹೋದರ ಸಹೋದರಿಯರಿಗೆ ಬಂದಿದೆ ಎಂದರೆ ಸಾಕ್ಷಿದಾರರು ಅವುಗಳ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ಮನೆಯಿಂದ ಸುಮಾರು 30ರಿಂದ 40 ಅಡಿ ದೂರದಲ್ಲಿರುವ ಘಟನೆಯ ಜಮೀನಿನ ಸರ್ವೆ ನಂಬರ್ ಮತ್ತು ಕ್ಷೇತ್ರ ನನಗೆ ಗೊತ್ತಿಲ್ಲ. ಅದು ನನ್ನ ಮುತ್ತಾತನಿಂದ ನಮಗೆ ಬಂದ ಆಸ್ತಿ. ಘಟನೆಯಾದಾಗ ಆ ಜಮೀನು ನನ್ನ ತಂದೆ ತಾಯಿಯ ಹೆಸರಿನಲ್ಲಿತ್ತು ಮತ್ತು ಅದರ ಸ್ವಾಧೀನದಲ್ಲಿ ನಾವು ಇದ್ದೆವು.

46. ನಮ್ಮ ಕುಟುಂಬಕ್ಕೆ ಸೇರಿದ ಜಮೀನುಗಳನ್ನು ಘಟನೆಗೂ ಮೊದಲು ಮತ್ತು ಈಗಲೂ ಸಹ ನನ್ನ ಸಹೋದರ ಪ್ರಾಸಾ-2 ಇವರು ಸಾಗುವಳಿ ಮಾಡುತ್ತಿದ್ದಾರೆ. ಸದರಿ ಜಮೀನುಗಳ ಸರ್ವೆ ನಂಬರ್ ಮತ್ತು ಕ್ಷೇತ್ರ ಇವುಗಳ ವಿವರ ನನ್ನ ಸಹೋದರನಿಗೆ ಹೆಚ್ಚು ಗೊತ್ತಿದೆ, ನನಗೆ ಹೆಚ್ಚಾಗಿ ಗೊತ್ತಿಲ್ಲ.

47. ನನ್ನ ತಾಯಿಯ ತಂದೆಯ ಹೆಸರು ದೊಡ್ಡವೆಂಕಟಪ್ಪ ಎಂದರೆ ಸರಿ. ಆ ದೊಡ್ಡವೆಂಕಟಪ್ಪನ ಸಹೋದರನ ಹೆಸರು ಚಿಕ್ಕವೆಂಕಟಪ್ಪ ಎಂದರೆ ಸರಿಯಲ್ಲ, ಚಿಕ್ಕವೆಂಕಟಪ್ಪನ

ಹೆಂಡತಿ ಹನುಮಕ್ಕ ಇವರ ಪರಿಚಯ ಇಲ್ಲ. ಅವರಿಗೆ ಗುರುಮೂರ್ತಿ ಮತ್ತು ಸಂಪಂಗಿ ಎಂಬ ಗಂಡುಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 4ನೇ ಆರೋಪಿ ಮತ್ತು 17ನೇ ಆರೋಪಿ ಇವರು ಗುರುಮೂರ್ತಿಯ ಮಕ್ಕಳು ಎಂದರೆ ಸರಿ. 5ನೇ ಆರೋಪಿ ಸಂಪಂಗಿಯ ಮಗ ಎಂದರೆ ಸರಿ. 4, 5 ಮತ್ತು 17ನೇ ಆರೋಪಿತರು ಮೇಲೆ ಹೇಳಿದಂತೆ ನಮ್ಮ ತಾಯಿಗೆ ಸಂಬಂಧಿಕರಿದ್ದರೂ ಸಹ ಅವರ ಸಂಬಂಧ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

48. ಜಮೀನಿನ ವಿವಾದಗಳಿಗೆ ಸಂಬಂಧಿಸಿದಂತೆ ನನ್ನ ತಾಯಿಯವರು ಎಸಿ, ಡಿಸಿ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ಅರ್ಜಿಗಳನ್ನು ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಪ್ರಾಸಾ-5 ಇವರು ನನ್ನ ತಾಯಿಯ ಸಹೋದರ ಎಂದರೆ ಸರಿ. ನನ್ನ ತಾಯಿಗೆ ಇನ್ನೂ ನಾಲ್ಕು ಜನ ಸಹೋದರರು ಇದ್ದಾರೆ ಎಂದರೆ ಸರಿ. ನನ್ನ ತಾಯಿಯ ಇನ್ನೊಬ್ಬ ಸಹೋದರ ವೆಂಕಟರಾಯಪ್ಪ ಎಂದರೆ ಸರಿ. ಆತನ ವಿರುದ್ದ ನನ್ನ ತಾಯಿ ಸಿವಿಲ್ ಮತ್ತು ರೆವಿನ್ಯೂ ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಒಂದೇ ಜಮೀನಿನ ಮೇಲೆ ನನ್ನ ತಂದೆ ತಾಯಿಯವರು ಮೂರು ಬ್ಯಾಂಕ್‌ಗಳಲ್ಲಿ ಸಾಲ ತೆಗೆದಿದ್ದರು ಮತ್ತು ಅವುಗಳಿಗೆ ನಾನು ಮತ್ತು ಪ್ರಾಸಾ-2 ಶ್ಯೂರಿಟಿಗಳಾಗಿದ್ದೆವು ಎಂದರೆ ಸರಿ. ಆ ಮೂರು ಅಡಮಾನ ಪತ್ರಗಳು ಈಗ ತೋರಿಸಿದ್ದು ಇವೇ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನಾನು ಒಂದು ಅಡಮಾನ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎನ್ನುತ್ತಾರೆ. ಸದರಿ ಮೂರು ದಾಖಲೆಗಳನ್ನು ನಿಡಿ-7ರಿಂದ 9 ಎಂದು ಗುರ್ತಿಸಲಾಯಿತು.

49. ಪ್ರಾಸಾ-5 ಮುನಿಯಪ್ಪನ ಹೆಂಡತಿ ರಾಮಕ್ಕ ಎಂದರೆ ಸರಿ. ದ್ಯಾವರಹಳ್ಳಿ ಗ್ರಾಮದ ಜಮೀನು ಸರ್ವೆ ನಂಬರ್ 42/1 ಇದಕ್ಕೆ ಸಂಬಂಧಿಸಿದ ಕಂದಾಯ ನ್ಯಾಯಾಲಯಗಳಲ್ಲಿನ

ದಾಖಲೆಗಳನ್ನು ಸಾಕ್ಷಿದಾರರಿಗೆ ತೋರಿಸಿ ಅವು ನಿಮ್ಮ ತಾಯಿಯ ವಿರುದ್ದ ಆದ ಆದೇಶಗಳು ಮತ್ತು ನೀವು ಈಗ ರಿವಿಷನ್ ಅರ್ಜಿ ಸಲ್ಲಿಸಿದ ದಾಖಲೆಗಳು ಮತ್ತು ಆ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು ಇವೆ ಎಂದರೆ ಸರಿ. ಸದರಿ ಮೂರು ದಾಖಲೆಗಳನ್ನು ನಿಡಿ-10, 11, 12 ಎಂದು ಗುರ್ತಿಸಲಾಯಿತು. ನಿಪಿ-12ರಲ್ಲಿರುವ ಗುರುಮೂರ್ತಿ ಇವರು 4 ಮತ್ತು 17ನೇ ಆರೋಪಿಯ ತಂದೆ ಎಂದರೆ ಸರಿ. ಅದರಲ್ಲಿ ಇರುವ ಎದುರುದಾರ ಶಾಂತಕುಮಾರ 6ನೇ ಆರೋಪಿ ಎಂದರೆ ಸರಿ.

50. ತಿಂಡ್ಲು ಗ್ರಾಮದ ಜಮೀನು ಸರ್ವೆ ನಂಬರ್ 112/4 ಇದಕ್ಕೆ ಸಂಬಂಧಿಸಿದ ಆರು ದಾಖಲೆಗಳನ್ನು ಸಾಕ್ಷಿದಾರರಿಗೆ ತೋರಿಸಿ ಅದರಲ್ಲಿ ನನ್ನ ತಾಯಿ, ನಾನು ಸಹ ಒಬ್ಬ ಪಕ್ಷಗಾರರು ಎಂದರೆ ಸರಿ. ಸದರಿ ವ್ಯಾಜ್ಯಗಳಲ್ಲಿ 6ನೇ ಆರೋಪಿ ಸಹ ಪಕ್ಷಗಾರರು ಎಂದರೆ ಸರಿ. ಸದರಿ ಆರು ದಾಖಲೆಗಳನ್ನು ನಿಡಿ-13 ರಿಂದ 18 ಎಂದು ಗುರ್ತಿಸಲಾಯಿತು.

51. ದ್ಯಾವರಹಳ್ಳಿ ಗ್ರಾಮದ ಜಮೀನು ಸರ್ವೆ ನಂಬರ್ 18/2 ಇದಕ್ಕೆ ಸಂಬಂಧಿಸಿದ ಮೂರು ಆದೇಶಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಇನ್ನೊಂದು ಅಸಲುದಾವೆ ಸಂಖ್ಯೆ 1407/2006 ತೋರಿಸಿ ಅದರಲ್ಲಿ ನಿಮ್ಮ ತಂದೆ, ನಿಮ್ಮ ಸಹೋದರ ಮತ್ತು ನೀವು ಎದುರುದಾರರಿದ್ದೀರಿ ಎಂದರೆ ನನಗೆ ಗೊತ್ತಿಲ್ಲ, ಸಮನ್ಸ್ ಜಾರಿಯಾಗಿಲ್ಲ ಎನ್ನುತ್ತಾರೆ. ಸದರಿ ನಾಲ್ಕು ದಾಖಲೆಗಳನ್ನು ನಿಡಿ-19 ರಿಂದ 22 ಎಂದು ಗುರ್ತಿಸಲಾಯಿತು.

52. ದ್ಯಾವರಹಳ್ಳಿ ಗ್ರಾಮದ ಜಮೀನು ಸರ್ವೆ ನಂಬರ್ 21, ಕ್ಷೇತ್ರ 2 ಎಕರೆ 20 ಗುಂಟೆ ಇದಕ್ಕೆ ಸಂಬಂಧಿಸಿದ ಎರಡು ಆದೇಶಗಳನ್ನು ಮತ್ತು ಒಂದು ದಾವೆಯನ್ನು

ತೋರಿಸಿದಾಗ ಅವುಗಳ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಒಂದು ವಿಭಾಗ ಯಾ ಪಾರಿಕತ್ ಎಂಬ ದಾಖಲೆಯನ್ನು ತೋರಿಸಿ ಅದರಲ್ಲಿ ಒಂದು ಸಹಿಯನ್ನು ತೋರಿಸಿ ನಿಮ್ಮದೇ ಎಂದು ಸೂಚಿಸಿದಾಗ ಸಾಕ್ಷಿದಾರರು ಆ ಸಹಿ ನನ್ನದಲ್ಲ ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ಎರಡು ಆದೇಶಗಳನ್ನು ಮತ್ತು ದಾವೆಯ ಪ್ರತಿಯನ್ನು ನಿಡಿ-23ರಿಂದ 25 ಎಂದು ಗುರ್ತಿಸಲಾಯಿತು. ವಿಭಾಗ ಪತ್ರದ ಪ್ರತಿಯನ್ನು ನಿಡಿ-26 ಎಂದು ಮತ್ತು ಸಾಕ್ಷಿದಾರರಿಗೆ ಸೂಚಿಸಿದ ಸಹಿಯನ್ನು ನಿಡಿ-26(ಎ) ಎಂದು ಗುರ್ತಿಸಲಾಯಿತು.

53. ತಿಂಡ್ಲು ಗ್ರಾಮದ ಜಮೀನು ಸರ್ವೆ ನಂಬರ್ 179, ಕ್ಷೇತ್ರ 4 ಎಕರೆ 18 ಗುಂಟೆ ಇದಕ್ಕೆ ಸಂಬಂಧಿಸಿದ ರೆವಿನ್ಯೂ ನ್ಯಾಯಾಲಯದ ರೋಜ್‌ನಾಮೆಯನ್ನು ಸಾಕ್ಷಿಗೆ ತೋರಿಸಿದಾಗ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅದನ್ನು ನಿಡಿ-27 ಎಂದು ಗುರ್ತಿಸಲಾಯಿತು.

54. ತಿಂಡ್ಲು ಗ್ರಾಮದ ಜಮೀನು ಸರ್ವೆ ನಂಬರ್ 110/2 ಇದಕ್ಕೆ ಸಂಬಂಧಿಸಿದ ದಾವೆಯನ್ನು ತೋರಿಸಿ ಅದರಲ್ಲಿ ನೀವು ಪಕ್ಷಗಾರರಿದ್ದೀರಿ ಎಂದರೆ ಸಾಕ್ಷಿದಾರರು ಅದರ ಬಗ್ಗೆ ನನಗೆ ಸಮನ್ಸ್ ಬಂದಿಲ್ಲ ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಡಿ-28 ಎಂದು ಗುರ್ತಿಸಲಾಯಿತು.

55. ದ್ಯಾವರಹಳ್ಳಿ ಗ್ರಾಮದ ಜಮೀನು ಸರ್ವೆ ನಂಬರ್ 1 ಇದಕ್ಕೆ ಸಂಬಂಧಿಸಿದ ಕಂದಾಯ ನ್ಯಾಯಾಲಯದ ಆದೇಶ ಮತ್ತು ಉಚ್ಛ ನ್ಯಾಯಾಲಯದ ಅರ್ಜಿ, ಆರ್ಡರ್ ಶೀಟ್, ಸಾಕ್ಷಿದಾರರ ತಾಯಿ ತೀರಿಕೊಂಡ ಮೇಲೆ ಸಾಕ್ಷಿದಾರರು ಮತ್ತು ಅವರ ಸಹೋದರರು ರೆಕಾರ್ಡಿಗೆ ಬಂದ ಆದೇಶಗಳನ್ನು ತೋರಿಸಿದಾಗ ಅವುಗಳನ್ನು ಸಾಕ್ಷಿದಾರರು ಗುರ್ತಿಸಿ ಸರಿ ಎಂದಿದ್ದರಿಂದ ಅವುಗಳನ್ನು ಒಟ್ಟಾಗಿ ನಿಡಿ-29 ಎಂದು ಗುರ್ತಿಸಲಾಯಿತು.

56. ದ್ಯಾವರಹಳ್ಳಿ ಗ್ರಾಮದ ಜಮೀನು ಸರ್ವೆ ನಂಬರ್ 49/1 ಇದಕ್ಕೆ ಸಂಬಂಧಿಸಿದ ಅಸಲುದಾವೆ 765/2019 ರ ರೋಜ್‌ನಾಮೆ ಮತ್ತು ವಾದ ಪತ್ರವನ್ನು ತೋರಿಸಿದಾಗ ಅವುಗಳ ಸಮನ್ಸ್ ನನಗೆ ಬಂದಿಲ್ಲ ಆದ್ದರಿಂದ ಅವುಗಳ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಅವುಗಳನ್ನು ಒಟ್ಟಾಗಿ ನಿಡಿ-30 ಎಂದು ಗುರ್ತಿಸಲಾಯಿತು.

57. ತಿಂಡ್ಲು ಗ್ರಾಮದ ಜಮೀನು ಸರ್ವೆ ನಂಬರ್ 112/5 ಇದಕ್ಕೆ ಸಂಬಂಧಿಸಿದ ರೆವಿನ್ಯೂ ನ್ಯಾಯಾಲಯದ ಆದೇಶ ಪ್ರತಿ ಮತ್ತು ಸಾಕ್ಷಿದಾರರ ತಾಯಿ ಮತ್ತು ಅವರ ನಂತರ ಸಾಕ್ಷಿದಾರರು ದಾಖಲಿಸಿದ ದಾವೆಗಳ ವಾದಪ್ರತಿಗಳನ್ನು ತೋರಿಸಲಾಗಿ ಅವುಗಳನ್ನು ಸಾಕ್ಷಿದಾರರು ಒಪ್ಪಿದ್ದರಿಂದ ಅವುಗಳನ್ನು ಒಟ್ಟಾಗಿ ನಿಡಿ-31 ಎಂದು ಗುರ್ತಿಸಲಾಯಿತು.

58. ಜಮೀನುಗಳಿಗೆ ಸಂಬಂಧಿಸಿದಂತೆ ಈಗ ಮೇಲೆ ಸೂಚಿಸಿದಂತೆ ವ್ಯಾಜ್ಯಗಳು ಇರುವುದರಿಂದ 6ನೇ ಆರೋಪಿ, 15ನೇ ಆರೋಪಿ ಮತ್ತು 16ನೇ ಆರೋಪಿ ಇವರ ಮೇಲೆ ನನಗೆ ವಿಪರೀತ ಕೋಪ ಇದೆ ಎಂದರೆ ಸರಿಯಲ್ಲ. 4, 5 ಮತ್ತು 17ನೇ ಆರೋಪಿತರು ಒಂದೇ ಕುಟುಂಬದವರು ಎಂದರೆ ಸರಿ. ಅವರ ವಿರುದ್ಧ ಸಹ ಜಮೀನುಗಳಿಗೆ ಸಂಬಂಧಿಸಿದಂತೆ ವ್ಯಾಜ್ಯ ಇರುವುದರಿಂದ ಅವರ ಮೇಲೂ ನನಗೆ ದ್ವೇಷ ಇದೆ ಎಂದರೆ ಸರಿಯಲ್ಲ. ಅದೇ ರೀತಿ 18 ಮತ್ತು 19ನೇ ಆರೋಪಿತರ ವಿರುದ್ಧ ಜಮೀನುಗಳಿಗೆ ಸಂಬಂಧಿಸಿದಂತೆ ವ್ಯಾಜ್ಯ ಇರುವುದರಿಂದ ಅವರ ಮೇಲೂ ಸಹ ನನಗೆ ದ್ವೇಷ ಇದೆ ಎಂದರೆ ಸರಿಯಲ್ಲ. 4, 5 ಮತ್ತು 17ನೇ ಆರೋಪಿತರಿಗೂ ಮತ್ತು ನಮಗೂ ಘಟನೆಗೂ ಮೊದಲು ಯಾವುದೇ ಜಗಳ ಆಗಿಲ್ಲ ಎಂದರೆ ಸರಿ. 6ನೇ ಆರೋಪಿ, 15ನೇ ಆರೋಪಿ ಮತ್ತು 16ನೇ ಆರೋಪಿ ಮತ್ತು ನಮಗೂ ಘಟನೆಗೂ ಮೊದಲು ಯಾವುದೇ ಜಗಳ ಆಗಿಲ್ಲ ಎಂದರೆ ಸರಿ. 18 ಮತ್ತು 19ನೇ ಆರೋಪಿತರಿಗೂ ಮತ್ತು ನಮಗೂ ಘಟನೆಗೂ ಮೊದಲು ಯಾವುದೇ ಜಗಳ ಆಗಿಲ್ಲ ಎಂದರೆ ಸರಿ.

59. ಈ ಪ್ರಕರಣ ಸಾಕ್ಷಿ ವಿಚಾರಣೆಗೆ ಸಿದ್ದವಾದ ಮೇಲೆ 2019ರಲ್ಲಿ ಆರೋಪಿತರಿಗೂ ಮತ್ತು ನಮಗೂ ಜಗಳ ಆಗಿದೆ. ಸಾಕ್ಷಿ ಹೇಳಬೇಡ ಎಂದು ಅವರು ಒತ್ತಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಜಗಳ ಆಗಿದೆ. ನಾವು ಅವರ ಮೇಲೆ ಮತ್ತು ಅವರು ನಮ್ಮ ಮೇಲೆ ಫಿರ್ಯಾದಿಯನ್ನು ನೀಡಿದ್ದೇವೆ. ಪ್ರಾಸಾ-1 ಇವರ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲು ಆದ ಮೇಲೆ ಜಗಳ ಪ್ರಾರಂಭ ಆಗಿದೆ. ನಾನು, ಪ್ರಾಸಾ-1, 2, 3 ಮತ್ತು 5 ಮತ್ತು ನನ್ನ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು ಒಂದು ಕಡೆ, ಹಾಗೂ ನಮ್ಮೂರಿನಲ್ಲಿ ವಾಸವಿರುವ ಆರೋಪಿತರು ಮತ್ತು 3ನೇ ಆರೋಪಿ ಇನ್ನೊಂದು ಕಡೆ ಮಧ್ಯೆ ಆ ರೀತಿ ಜಗಳ ಆಗಿದೆ. ಈ ಬಗ್ಗೆ ಪೋಲಿಸರು ಫಿರ್ಯಾದಿಯನ್ನು ಸ್ವೀಕರಿಸಿದ್ದರೂ ಸಹ ಅವರು ಪ್ರಕರಣ ದಾಖಲಿಸಿಲ್ಲ.

60. 6ನೇ ಆರೋಪಿ ಶಾಂತಕುಮಾರನ ಜಾಮೀನು ರದ್ದು ಮಾಡುವಂತೆ ನನ್ನ ಅಣ್ಣ ಪ್ರಾಸಾ-1 ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಉಚ್ಚ ನ್ಯಾಯಾಲಯವು ಇದೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವಂತೆ ತಿಳಿಸಿದ್ದಾರೆ ಎಂದರೆ ಸರಿ. ಅದಾದ ನಂತರ ಪ್ರಾಸಾ-1ರವರು ಈ ನ್ಯಾಯಾಲಯಕ್ಕೆ ಆ ರೀತಿ ಯಾವುದೇ ಅರ್ಜಿ ಸಲ್ಲಿಸಿಲ್ಲ. ಆರೋಪಿತರು ಸಾಕ್ಷಿ ಹೇಳದಂತೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಬೆಳಗಿನ ಸಮಯವಾದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ಅವರು ಹೇಳಿದಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ ಮತ್ತು ಓದಿ ಹೇಳಲಾಗಿ ಸಾಕ್ಷಿದಾರರು ಸರಿ ಇದೆ ಎಂದು ಒಪ್ಪಿದ್ದಾಗಿ ದೃಡೀಕರಿಸುತ್ತೇನೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ವಿ. ಎಂ. ಆನಂದಶೆಟ್ಟಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ಮಧ್ಯಾಹ್ನ ಸಾಕ್ಷಿಗೆ ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 4, 15ರಿಂದ 19ನೇ ಆರೋಪಿತರ ಪರ**

**ಶ್ರೀ ಟಿ ಎಸ್ ವಕೀಲರಿಂದಃ**

61. ಈಗ ತೋರಿಸಲಾದ ದಾಖಲೆಯಂತೆ ನನ್ನ ಮತ್ತು ಪ್ರಾಸಾ-1 ಮತ್ತು 3 ಇವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-32 ಎಂದು ಗುರ್ತಿಸಲಾಯಿತು. ಈ ವಿಚಾರಣೆಯಲ್ಲಿರುವ ಗಲಾಟೆ ಆದ ಮೇಲೆ ಒಬ್ಬಬ್ಬ ಆರೋಪಿತರ ಮೇಲೆ ನಾನೇ ಆಕ್ರಮಣ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಹಬ್ಬದ ದಿನಗಳಲ್ಲಿ, ರಜಾ ದಿನಗಳಲ್ಲಿ ಮತ್ತು ಕೆಲಸ ಇದ್ದಾಗ ಬೆಂಗಳೂರಿನಿಂದ ಊರಿಗೆ ಹೋಗುತ್ತಿದ್ದೆ. ಘಟನೆ ಶಿವರಾತ್ರಿ ದಿನ ಆಗಿದೆ. 1ನೇ ಆರೋಪಿ ತಿಮ್ಮಯ್ಯನ ಹತ್ತಿರ ಇಟ್ಟಿಗೆ ವ್ಯವಹಾರದ ಬಗ್ಗೆ ಮಾತನಾಡುವ ಸಲುವಾಗಿ ಮತ್ತು ಮನೆ ಕಡೆ ನೋಡಿಕೊಂಡು ಬರಲು ದಿಃ10.02.2010ರಂದು ಊರಿಗೆ ಹೋಗಿದ್ದೆ. ದಿಃ10.02.2010ರಂದು 1ನೇ ಆರೋಪಿಯನ್ನು ನಾನು ಭೇಟಿಯಾಗಿದ್ದೇನೆ. ಆತನಿಗೆ ಫೋನ್ ಮಾಡಿ ಬೆಳಗ್ಗೆ ಸುಮಾರು 07.30ಕ್ಕೆ ಊರಿಗೆ ಕರೆಸಿಕೊಂಡಿದ್ದೆ. ಸಾಕ್ಷಿದಾರರು ಮುಂದುವರಿದು ದಿಃ10.02.2010ರಂದು ಆತನೊಂದಿಗೆ ಕೇವಲ ಫೋನಿನಲ್ಲಿ ಮಾತನಾಡಿದೆ. ಆತ ದಿಃ12.02.2010ರಂದು ಊರಿಗೆ ಬರುವುದಾಗಿ ಹೇಳಿದ ಎನ್ನುತ್ತಾರೆ. 12ನೇ ತಾರೀಖು 1ನೇ ಆರೋಪಿ ಬರುತ್ತಾರೆ ಅವರಿಗೆ ದುಡ್ಡು ಕೊಡಬೇಕೆಂದು ನನ್ನ ಅಣ್ಣನಿಗೆ (ಪ್ರಾಸಾ-2) ಹೇಳಿದ್ದೆ. 12ನೇ ತಾರೀಖು ನಾನೇ ದುಡ್ಡು ಕೊಡುತ್ತೇನೆಂದು ಪ್ರಾಸಾ-2ರವರಿಗೆ ಹೇಳಿದೆ. ಶಿವರಾತ್ರಿ ಹಬ್ಬ ಇದ್ದುದ್ದರಿಂದ ಮತ್ತು ದುಡ್ಡು ಕೊಡಬೇಕಾಗಿದ್ದರಿಂದ ದಿಃ12.02.2010ರಂದು ನಾನು ಊರಿಗೆ ಹೋದೆ. ಘಟನೆಗೂ ಮೊದಲು ದಿಃ08.02.2010ರಂದು 1ನೇ ಆರೋಪಿಯನ್ನು ಊರಲ್ಲಿನ ನಮ್ಮ ಮನೆಯ ಹತ್ತಿರ ಭೇಟಿಯಾಗಿದ್ದೆ. ಆ ದಿನ ಆತನಿಗೆ ಹಣ ನಾನು ನೀಡಿಲ್ಲ, ಹಣ ಕೊಡುವುದಾಗಿ ಹೇಳಿದ್ದೆ.

62. ನಿಮ್ಮೂರಿನ ಆರೋಪಿತರನ್ನು ಹೊರತುಪಡಿಸಿ ಉಳಿದ ಆರೋಪಿತರ ಹೆಸರು ಫಿರ್ಯಾದಿ ಕೊಡುವಾಗ ನಿಮಗೆ ಗೊತ್ತಿತ್ತೇ ಎಂದರೆ ಸಾಕ್ಷಿದಾರರು 1ನೇ ಆರೋಪಿ ತಿಮ್ಮಯ್ಯ, 9ನೇ ಆರೋಪಿ ಕೇಬಲ್ ಕುಮಾರ್ ಇವರ ಹೆಸರು ಗೊತ್ತಿತ್ತು, ಬೇರೆ ಊರಿನ ಉಳಿದ ಆರೋಪಿತರ ಹೆಸರುಗಳು ಗೊತ್ತಿರಲಿಲ್ಲ ಎನ್ನುತ್ತಾರೆ. ಬೇರೆ ಊರಿನ ಆರೋಪಿತರಾದ 2, 3, 7ರಿಂದ 14, ಇವರನ್ನು ಘಟನೆಗೂ ಮೊದಲು ನೋಡಿದ್ದೀರಾ ಎಂದರೆ ಸಾಕ್ಷಿದಾರರು ಘಟನೆಯ ದಿನವೇ ಅವರನ್ನು ನೋಡಿದ್ದೇನೆ ಎನ್ನುತ್ತಾರೆ. 9ನೇ ಆರೋಪಿಯನ್ನು ಸಹ ಘಟನೆಗೂ ಮೊದಲು ದಿ:08.02.2010ರಂದು ನೋಡಿದ್ದೆ. ದಿ:10.02.2010ರಂದು 1 ಮತ್ತು 9ನೇ ಆರೋಪಿತರು ನಮ್ಮ ಮನೆಯ ಹತ್ತಿರ ಬಂದಿದ್ದರು ಆಗ ಸಹ ನೋಡಿದ್ದೇನೆ. ದಿ:08.02.2010ರಂದು 1ನೇ ಆರೋಪಿಗೆ ಹಬ್ಬದ ದಿನ ಹಣ ಕೊಡುವುದಾಗಿ ಹೇಳಿದ್ದೆ. ದಿ:08.02.2010 ಮತ್ತು ದಿ:10.02.2010ರಂದು 1ನೇ ಆರೋಪಿಯನ್ನು ಭೇಟಿಯಾಗಲು ಊರಿಗೆ ಹೋಗಿದ್ದೆ. 1ನೇ ಆರೋಪಿ ನನ್ನ ಕ್ಲಾಸ್‌ಮೇಟ್ ಮತ್ತು ಸ್ನೇಹಿತ. ದಿ:12.02.2010ರವರೆಗೆ ನನಗೂ ಮತ್ತು ಆತನಿಗೂ ಯಾವುದೇ ವಿಷಯವಾಗಿ ಜಗಳ ಆಗಿಲ್ಲ. 1 ಮತ್ತು 9ನೇ ಆರೋಪಿತರು ದಿ:08.02.2010 ಮತ್ತು 10.02.2010ರಂದು ನನ್ನನ್ನು ಭೇಟಿಯಾಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

63. 4ರಿಂದ 6, 15ರಿಂದ 19ನೇ ಆರೋಪಿತರು ನಮ್ಮೂರಿನವರು ಮತ್ತು ನನ್ನ ಜಾತಿಯವರು ಇದ್ದಾರೆ. ಅವರ ತಂದೆಯ ಹೆಸರು ಮತ್ತು ವಿಳಾಸ ನನಗೆ ಘಟನೆಗೂ ಮೊದಲಿನಿಂದ ಗೊತ್ತಿದೆ. ಊರಲ್ಲಿ ನಮ್ಮ ಮನೆಯ ಉತ್ತರ ದಿಕ್ಕಿಗೆ 6ನೇ ಆರೋಪಿ ಶಾಂತಕುಮಾರನ ಮನೆ ಇದೆ. ಆ ಮನೆಯಲ್ಲಿ 6, 15 ಮತ್ತು 16ನೇ ಆರೋಪಿತರು ಮತ್ತು ಅವರ ಕುಟುಂಬದವರು ವಾಸವಿರುತ್ತಾರೆ. ಘಟನೆಯ ಸಮಯದಲ್ಲಿ ಅವರ ಮನೆಯಲ್ಲಿ ಸ್ಕೊಡಾ ಮತ್ತು ಸ್ಕಾರ್ಪಿಯೋ ಕಾರ್ ವಾಹನಗಳಿದ್ದವು. ಆ ವಾಹನಗಳನ್ನು ಅವರು ತಮ್ಮ ಮನೆಯ

ಮುಂದೆ ನಿಲ್ಲಿಸುತ್ತಿದ್ದರು ಎಂದರೆ ಸರಿ. ನಮ್ಮ ಮತ್ತು 6ನೇ ಆರೋಪಿಯ ಮನೆಯ ಮಧ್ಯೆ ನನ್ನ ಚಿಕ್ಕಪ್ಪ ದೊಡ್ಡಚಿನ್ನಪ್ಪ ಈತನ ಮನೆ ಇದೆ ಎಂದರೆ ಸರಿ. ದೊಡ್ಡಚಿನ್ನಪ್ಪನ ಮನೆಯಲ್ಲಿ ಆತ, ಆತನ ಹೆಂಡತಿ ಮತ್ತು ಆತನ ಮಕ್ಕಳಾದ ಪ್ರಾಸಾ-1, 3, ಮೃತ ದೇವರಾಜು ಮತ್ತು ಇನ್ನೊಬ್ಬ ವೆಂಕಟಪ್ಪ ಇರುತ್ತಿದ್ದರು ಎಂದರೆ ಸರಿ. ಈಗ ಆ ಮನೆಯಲ್ಲಿ ದೊಡ್ಡಚಿನ್ನಪ್ಪನ ಹೆಂಡತಿ ನಾರಾಯಣಮ್ಮ, ಪ್ರಾಸಾ-1, 2, ಅವರ ಹೆಂಡತಿ ಮಕ್ಕಳು ಇರುತ್ತಾರೆ.

64. ``ಪಂಡಿತಪುರದ ತಿಮ್ಮಯ್ಯ ಮತ್ತು ಅವರ ಕಡೆಯವರು ಹಾಗೂ ನಮ್ಮೂರಿನ ಗೋವಿಂದರಾಜು, ಮುನಿರಾಜುರವರುಗಳು ಬೈಕುಗಳಲ್ಲಿ ಬಂದು`` ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೀರಾ ಎಂದರೆ ನೀಡಿದ್ದೇನೆ ಎನ್ನುತ್ತಾರೆ. ಆರೋಪಿತರಾಗಿರುವ 19 ಜನರ ಹೆಸರನ್ನು ನೀವು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಅಷ್ಟರಲ್ಲಿ ನಮ್ಮ ಕಡೆಯವರು ನನ್ನನ್ನು ಮನೆಯೊಳಕ್ಕೆ ಹಾಕಿ ಚಿಲಕ ಹಾಕಿದರು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ಈ ಘಟನೆಗೆ ನಮ್ಮೂರಿನ ವೆಂಕಟೇಶಪ್ಪನ ಮಗನಾದ ಶಾಂತಕುಮಾರನ ಚಿತಾವಣೆಯೇ ಕಾರಣವಾಗಿದ್ದು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ಘಟನೆ ಸಮಯದಲ್ಲಿ ಆರೋಪಿತರಾದ 6, 15ರಿಂದ 19 ಇವರು ಬಂದಿದ್ದರು ಎಂದು ಅವರ ಹೆಸರುಗಳನ್ನು ಉಲ್ಲೇಖಿಸಿ ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ಅವರು ಘಟನೆ ಸಮಯದಲ್ಲಿ ಬಂದಿದ್ದರು ಎಂದು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

65. ಘಟನೆಯ ಸಮಯದಲ್ಲಿ ಪ್ರಾಸಾ-1ರಿಂದ 3ರವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮೃತರನ್ನು ಮತ್ತು ಗಾಯಾಳುಗಳನ್ನು ದೇವನಹಳ್ಳಿ ಆಸ್ಪತ್ರೆಯಲ್ಲಿ ಮೊದಲ ಬಾರಿಗೆ ನೋಡಿದ್ದೇನೆ ಎಂದರೆ ಸರಿಯಲ್ಲ. ಪ್ರಾಸಾ-1ರಿಂದ 3 ಇವರನ್ನು ನಾನು ನೋಡಿದಾಗ ಅವರಿಗೆ

ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ನಾನೇ ಗಾಯ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾರ ಮೇಲೆ ದ್ವೇಷವಿದೆಯೋ ಅವರೆನ್ನೆಲ್ಲಾ ಆರೋಪಿತರನ್ನಾಗಿ ಮಾಡಿ ಸುಳ್ಳು ಫಿರ್ಯಾದಿಯನ್ನು ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುಗಳು ತಮಗೆ ಯಾರು ಹಲ್ಲೆ ಮಾಡಿದ್ದಾರೆ ಎಂದು ಇತಿಹಾಸ ನೀಡುವಾಗ ವೈದ್ಯರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ಆಗ ಅವರಿಗೆ ಹಲ್ಲೆ ಮಾಡಿದವರು ಯಾರು ಎಂದು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಫಿರ್ಯಾದುದಾರ ಹೇಳಿದಂತೆ ಫಿರ್ಯಾದಿಯನ್ನು ಬರೆದಿದ್ದಾಗಿ ಅದರಲ್ಲಿ ದೃಡೀಕರಣ ಮಾಡಿಲ್ಲ ಎಂದರೆ ನೆನಪಿಲ್ಲ. ಇದೇ ರೀತಿ ಸಾಕ್ಷಿ ಹೇಳಬೇಕೆಂದು ಪ್ರಾಸಾ-1ರಿಂದ 3 ಮತ್ತು 7 ಇವರಿಗೆ ಹೇಳಿಕೊಟ್ಟು ಸಾಕ್ಷಿ ಹೇಳಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 12ನೇ ಆರೋಪಿತರ ಪರ ಶ್ರೀ ಎಂಆರ್ಎನ್ ವಕೀಲರಿಂದಃ**

66. ವಕೀಲನಾಗಿ ನೊಂದಾಯಿಸಿಕೊಳ್ಳಲು ದಿಃ22.08.2013ರಂದು ನಾನು ಸಲ್ಲಿಸಿದ ಅರ್ಜಿಯಲ್ಲಿ ಕಾಲಂ ನಂ.15(ಅ) ನಲ್ಲಿ ಯಾವುದೇ ನ್ಯಾಯಾಲಯದಿಂದ ಶಿಕ್ಷೆಗೆ ಒಳಪಟ್ಟಿಲ್ಲ ಎಂದು ತಿಳಿಸಿದ್ದೇನೆ ಎಂದರೆ ಸರಿ. ಸದರಿ ಅರ್ಜಿಯನ್ನು ನಿಡಿ-33 ಎಂದು ಗುರ್ತಿಸಲಾಯಿತು. ದಿಃ30.01.2013ರಂದು ಎಸ್.ಸಿ. 805/2006 ಪ್ರಕರಣದಲ್ಲಿ ನನಗೆ ಮೂರು ವರ್ಷ ಶಿಕ್ಷೆ ಆಗಿತ್ತು ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಎನ್‌ರೋಲ್‌ಮೆಂಟ್ ಆಗುವಾಗ ಮಾನ್ಯ ಉಚ್ಛ ನ್ಯಾಯಾಲಯವು ಶಿಕ್ಷೆಯನ್ನು ಅಮಾನತ್ತಿನಲ್ಲಿರಿಸಿತ್ತು ಎನ್ನುತ್ತಾರೆ. ಎಸ್.ಸಿ. 805/2006 ಪ್ರಕರಣದ ತೀರ್ಪನ್ನು ನಿಡಿ-34 ಎಂದು ಗುರ್ತಿಸಲಾಯಿತು. ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ಕ್ರೈಂ ನಂ. 83/2010 ರಲ್ಲಿ ನನ್ನ ವಿರುದ್ದ ಪ್ರಕರಣ ದಾಖಲಾಗಿದೆ ಎಂದರೆ ಗೊತ್ತಿಲ್ಲ. ಸದರಿ ದಾಖಲೆಯನ್ನು ನಿಡಿ-35 ಎಂದು ಗುರ್ತಿಸಲಾಯಿತ. ಸಾಕ್ಷಿದಾರರು ಮುಂದುವರಿದು ಅಸಲುದಾವೆ ಸಂಖ್ಯೆ 3187-2022ರಲ್ಲಿ ನನ್ನ ವಿರುದ್ದ ತೆಗೆಯಲಾದ ರೌಡಿಶೀಟ್ ಮೇಲೆ ಸ್ಟೇ ಆಗಿದೆ

ಎನ್ನುತ್ತಾರೆ. ನನ್ನ ವಿರುದ್ದ ಈಗ ತೋರಿಸಿದ 17 ಪ್ರಕರಣಗಳು ದಾಖಲಾಗಿವೆ ಎಂದರೆ ಅವುಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಅವುಗಳನ್ನು ಒಟ್ಟಾಗಿ ನಿಡಿ-36 ಎಂದು ಗುರ್ತಿಸಲಾಯಿತು.

67. ನನ್ನ ಮತ್ತು 1ನೇ ಆರೋಪಿಯ ಮಧ್ಯೆ ಇಟ್ಟಿಗೆ ವ್ಯವಹಾರ ಆದ ಬಗ್ಗೆ ಯಾವುದೇ ಬರವಣಿಗೆ ಇಲ್ಲ. ಕೂಡಿಹಾಕಿದ ಮೇಲೆ ನಾನು ಹೊರಗೆ ಬರುವ ಪ್ರಯತ್ನ ಮಾಡಿದೆ. ಆದರೆ ಆಗಲಿಲ್ಲ. ಮನೆಯಲ್ಲಿರುವ ಗಡಾರ ಆ ರೀತಿಯ ಸಲಕರಣೆಗಳನ್ನು ಉಪಯೋಗಿಸಿ ಹೊರಗೆ ಬರುವ ಪ್ರಯತ್ನ ಮಾಡಿಲ್ಲ. ನನ್ನನ್ನು ಕೂಡಿಹಾಕಿದರು ಎಂದು ಹೇಳುವ ಕೋಣೆಗೆ ಕಿಟಕಿ ಇದೆ. ಮನೆಯಲ್ಲಿ ಇದ್ದ ಸಲಕರಣೆಗಳನ್ನು ತಗೆದುಕೊಂಡು ಗಲಾಟೆ ಮಾಡುತ್ತಿದ್ದವರ ಕಡೆಗೆ ಕಿಟಕಿಯಿಂದ ಎಸೆಯುವ ಪ್ರಯತ್ನ ಮಾಡಿಲ್ಲ. ಕೋಪ ಬಂದು ಕಿಟಕಿಯ ಗಾಜನ್ನು ಒಡೆಯುವ ಪ್ರಯತ್ನ ಮಾಡಿಲ್ಲ. ನನ್ನನ್ನು ಕೂಡಿ ಹಾಕಿದ ಕೋಣೆಯಿಂದ ಘಟನೆಯ ಸ್ಥಳ 15ರಿಂದ 20 ಅಡಿ ದೂರದಲ್ಲಿದೆ. ಘಟನೆ ಸುಮಾರು 20ರಿಂದ 30ನಿಮಿಷದವರೆಗೆ ಆಗಿದೆ. ಘಟನೆಯಾದಾಗ ಯಾರು ಬಂದರು, ಯಾರು ಹೋದರು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ 4-5 ಕಡೆ ರಕ್ತದ ಕಲೆ ಯಥೇಚ್ಚವಾಗಿ ಆಗಿತ್ತು. ರಕ್ತ ಚೆಲ್ಲಿದ್ದರ ಮೇಲೆ ಜನರು ಓಡಾಡಿದ ಹೆಜ್ಜೆ ಗುರುತು ಆಗಿತ್ತು ಎಂದರೆ ಸಾಕ್ಷಿದಾರರು ನೆನಪಿಲ್ಲ ಎನ್ನುತ್ತಾರೆ. ಮೃತರನ್ನು ಮತ್ತು ಗಾಯಾಳುಗಳನ್ನು ನನ್ನ ವಾಹನದಲ್ಲಿ ಹಾಕುವಾಗ ನನ್ನ ಬಟ್ಟೆಗಳಿಗೂ ರಕ್ತ ಆಗಿದೆ. ನನ್ನ ರಕ್ತವಾದ ಬಟ್ಟೆಗಳನ್ನು ಪೋಲಿಸರು ಪಡೆದುಕೊಂಡಿಲ್ಲ. ರಕ್ತದ ಕಲೆಗಳು ಮನೆಯ ಮುಂಭಾಗ ರಸ್ತೆಯಲ್ಲಿ ಇದ್ದವು. ಕೋಣೆಯಿಂದ ನಾನು ಹೊರಗೆ ಬಂದಾಗ ಘಟನಾ ಸ್ಥಳದಲ್ಲಿ ಗಾಯಾಳುಗಳನ್ನು ಸೇರಿ 7-8 ಜನ ಇದ್ದರು. ಹಲ್ಲೆ ಮಾಡಿದವರನ್ನು ಚೇಸ್ ಮಾಡುವ ಪ್ರಯತ್ನ ನಾನಾಗಲೀ ಅಥವಾ ಅಲ್ಲಿದ್ದ 7-8 ಜನ ಆಗಲೀ ಮಾಡಿಲ್ಲ. ಅಲ್ಲಿದ್ದ 7-8 ಜನರು

ಹಲ್ಲೆ ಮಾಡಿದವರ ಮೇಲೆ ದೊಣ್ಣೆಗಳನ್ನಾಗಲೀ, ಕಲ್ಲುಗಳನ್ನಾಗಲೀ ಎಸೆಯುವ ಪ್ರಯತ್ನ ಮಾಡಿಲ್ಲ. ಅಲ್ಲಿ ಸೇರಿದ ಊರಿನ ಜನರು ಯಾರು ಎಂದು ಈಗ ನೆನಪಿಲ್ಲ.

68. ನಾನು ಸಮಾಜಸೇವೆ, ರಿಯಲ್ ಎಸ್ಟೇಟ್, ರಾಜಕೀಯ ಮತ್ತು ವಕೀಲ ವೃತ್ತಿ ಮಾಡುತ್ತಿರುವುದರಿಂದ ನೂರಾರು ಜನ ನನ್ನನ್ನು ಹುಡುಕಿಕೊಂಡು ಮನೆಯ ಹತ್ತಿರ ಬರುತ್ತಾರೆ ಎಂದರೆ ಸರಿ. ನನಗೆ ವೈರಿಗಳು ಮತ್ತು ಸ್ನೇಹಿತರು ಸಮ ಸಂಖ್ಯೆಯಲ್ಲಿದ್ದಾರೆ ಎಂದರೆ ಸರಿ. ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 9ನೇ ಆರೋಪಿ ಮತ್ತು ನನಗೆ ಇರುವ ವೈರಿಗಳು ಸೇರಿಕೊಂಡು ಈಗ ಘಟನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರು ನಾನು ಹೇಳಿದಂತೆ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ. 9ನೇ ಆರೋಪಿ ಸಹ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ.

69. 1ನೇ ಆರೋಪಿ ಟೈಫೈಡ್ ಆಗಿ ದಿಃ10.02.2010ರಿಂದ ದಿಃ16.02.2010ರವರೆಗೆ ಪೀಸ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು ಎಂದರೆ ಸರಿಯಲ್ಲ. ಘಟನಾ ಸಮಯದಲ್ಲಿ 1ನೇ ಆರೋಪಿ ಆಗಲಿ ಅಥವಾ 12ನೇ ಆರೋಪಿಯಾಗಲೀ ಘಟನಾ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು 1ನೇ ಆರೋಪಿಗೂ ಇಟ್ಟಿಗೆ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ರಾಜಕೀಯವಾಗಿ ಬೇರೆ ಪಕ್ಷದಲ್ಲಿ ಇರುವುದರಿಂದ ಆತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 9ನೇ ಆರೋಪಿ ಈತನು 1ನೇ ಆರೋಪಿಯ ಅತ್ತೆಯ ಮಗಳ ಮಗ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ 2 ಮತ್ತು 10ನೇ ಆರೋಪಿಗಳ ಪರ**
**ಶ್ರೀ ಕೆಎನ್‌ಆರ್ ವಕೀಲರಿಂದಃ**

70. ದಿ:11.02.2010ರಂದು ನಾನು ಬೆಂಗಳೂರಿನ ನನ್ನ ಮನೆಯಲ್ಲಿದ್ದೆ. ಎರಡು ಕಾರು ಮತ್ತು ನಾಲ್ಕೈದು ಬೈಕ್‌ಗಳನ್ನು ಯಾರು ಓಡಿಸುತ್ತಿದ್ದರು ಎಂದು ಹೇಳಲು ಬಹಳ ವರ್ಷವಾದ್ದರಿಂದ ಈಗ ಹೇಳಲು ಆಗುವುದಿಲ್ಲ. ಘಟನೆಯ ಬಗ್ಗೆ ನಾನು ಬರವಣಿಗೆಯಲ್ಲಿ ದೂರನ್ನು ಬರೆದು ನಮ್ಮ ಚಿಕ್ಕಪ್ಪನ ಮಗ ಮುನಿಕೃಷ್ಣಪ್ಪನ ಹತ್ತಿರ ಸಹಿ ಮಾಡಿಸಿಕೊಂಡು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಮುನಿಕೃಷ್ಣ ಹೇಳಿದಂತೆ ನಾನು ನನ್ನ ಹಸ್ತಾಕ್ಷರದಲ್ಲಿ ಫಿರ್ಯಾದಿಯನ್ನು ಬರೆದು ನೀಡಿರುತ್ತೇನೆ. ಫಿರ್ಯಾದಿಯಲ್ಲಿ 19 ಜನ ಬಂದು ಘಟನೆ ಮಾಡಿದ್ದಾರೆ ಎಂದು ಬರೆಯಲು ತೊಂದರೆ ಇರಲಿಲ್ಲ.

71. ಆಸ್ಪತ್ರೆಯಲ್ಲಿ 19 ಜನರು ಸೇರಿ ಹಲ್ಲೆ ಮಾಡಿದ್ದಾಗಿ ಇತಿಹಾಸವನ್ನು ಹೇಳಿ ಬರೆಸಿದ್ದೇವೆ. ಫಿರ್ಯಾದಿಯಲ್ಲಿ ಇತರರು ಎಂದು ತಿಳಿಸಿದವರ ಚಹರೆಯ ವಿವರ ಬರೆಯಲು ತೊಂದರೆ ಇರಲಿಲ್ಲ. 2 ಮತ್ತು 10ನೇ ಆರೋಪಿತರು ಆ ದಿನ ಘಟನಾ ಸ್ಥಳಕ್ಕೆ ಬರದೇ ಇರುವುದರಿಂದ ಅವರ ಚಹರೆ ಬರೆಯಲು ನಿಮಗೆ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮೂರಿನ ಆರೋಪಿತರನ್ನು ಹೊರತುಪಡಿಸಿ ಉಳಿದ ಆರೋಪಿತರಿಗೆ ನಮ್ಮ ಜಾತಿಯ ಬಗ್ಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. 2 ಮತ್ತು 10ನೇ ಆರೋಪಿತರನ್ನು ಅವರು ನ್ಯಾಯಾಲಯಕ್ಕೆ ಬಂದಾಗಲೇ ನೋಡಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 10ನೇ ಆರೋಪಿತರು ಬೊಮ್ಮವಾರ ಗ್ರಾಮದವರು. ಆ ಊರಿನ ಛೇರ್ಮನ್ ರಾಮಮೂರ್ತಿ ಅವರಿಗೂ ಮತ್ತು 2 ಮತ್ತು 10ನೇ ಆರೋಪಿತರಿಗೆ ವೈಷಮ್ಯ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಮಮೂರ್ತಿ ನನಗೆ ಸ್ನೇಹಿತ ಮತ್ತು ಆತನ ಮಾತು ಕೇಳಿ ಅವರನ್ನು ಈ ಪ್ರಕರಣದಲ್ಲಿ ಆರೋಪಿತರನ್ನಾಗಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 17ನೇ ಆರೋಪಿ ಪರ ಶ್ರೀ ಕೆವಿಕೆ ವಕೀಲರು ಹಾಗೂ 3, 7, 11, 13 ಮತ್ತು 14ನೇ ಆರೋಪಿಗಳ ಪರ ಶ್ರೀ ಕೆಜೆಜೆ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ಅವರು ಹೇಳಿದಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ ಮತ್ತು ಓದಿ ಹೇಳಲಾಗಿ ಸಾಕ್ಷಿದಾರರು ಸರಿ ಇದೆ ಎಂದು ಒಪ್ಪಿದ್ದಾಗಿ ದೃಡೀಕರಿಸುತ್ತೇನೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ವಿ. ಎಂ. ಆನಂದಶೆಟ್ಟಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.